# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SECONDARY EDUCATION EXAMINATION BOARD

Malleshwaram, Bengaluru – 560003.

## 2020-21 ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ – 1

**ವಿಷಯ : ದ್ವಿತೀಯ ಭಾಷೆ – ಕನ್ನಡ** **ವಿಷಯ ಸಂಕೇತ : 33-K**

**ಅವಧಿ : 3 ಗಂಟೆ** **ಗರಿಷ್ಠ ಅಂಕಗಳು : 80**

**ಶಾಲಾ ಅಭ್ಯರ್ಥಿಗಳಿಗೆ**

---

## ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 4 x 1 = 4**

1. 'ಅಂಥದು, ಇಂಥದು' ಪದಗಳು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿವೆ.

   ಎ. ಪ್ರಕಾರವಾಚಕ

   ಬಿ. ಪರಿಮಾಣವಾಚಕ

   ಸಿ. ಸಂಖ್ಯಾವಾಚಕ

   ಡಿ. ದಿಗ್ವಾಚಕ

2. 'ಅಂಬುಜ' ಪದದಲ್ಲಿರುವ ಮಾತ್ರೆಗಳ ಸಂಖ್ಯೆ :

   ಎ. ಮೂರು

   ಬಿ. ನಾಲ್ಕು

   ಸಿ. ಐದು

   ಡಿ. ಆರು

3. 'ಹೊಂಬಾಳೆ' ಪದದಲ್ಲಿ ಕಂಡುಬರುವ ಸಮಾಸ :

   ಎ. ದ್ವಿಗುಸಮಾಸ

   ಬಿ. ತತ್ಪುರುಷಸಮಾಸ

   ಸಿ. ದ್ವಂದ್ವಸಮಾಸ

   ಡಿ. ಕರ್ಮಧಾರಯಸಮಾಸ

4. 'ಅಂಕಿತನಾಮ'ದ ಗುಂಪಿಗೆ ಸೇರಿದ ಪದ :

   ಎ. ಊರು

   ಬಿ. ಬೆಟ್ಟ

   ಸಿ. ಕಾವೇರಿ

   ಡಿ. ನದಿ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 12 x 1 = 12**

5. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?

6. ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾದ ಪರಿಣಾಮವೇನು?

7. ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ?

8. ಪುಟ್ಟರಾಜರ ತಂದೆ ತಾಯಿಯರ ಹೆಸರೇನು?

9. ಸಸ್ತನಿಗಳ ಆಶ್ರಯದಾಣಗಳು ಯಾವುವು?

10. ಗೋಪಾಲನು ಹೊಸಪಂಚೆಯನ್ನು ಬಯಸಿದುದೇಕೆ?

11. ಮೇಲೇರಿದವರು ತ್ರಿಶಂಕುಗಳು ಆಗುವುದು ಯಾವಾಗ?

12. ಬುದ್ಧನು ಅರಿತುಕೊಂಡ ಬದುಕಿನ ಸತ್ಯ ಯಾವುದು?

13. ಮನಸ್ಸು ಅಳಿಯಾಸೆಗಳ ಸುಳಿಗೆ ಏಕೆ ಸಿಲುಕಬಾರದು?

14. ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಲಾಗಿದೆ?

15. ವೇದಾಂತವನ್ನು ಓದಿದವನು ಹೇಗಿರಬೇಕೆಂದು ಸಿದ್ಧರಾಮರು ಹೇಳಿದ್ದಾರೆ?

16. ಉತ್ತರನು ನಿಟ್ಟೋಟದಲ್ಲಿ ಏಕೆ ಓಡಿದನು?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 8 x 2 = 16**

17. ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು?

18. ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯನಾದುದು ಹೇಗೆ?

19. ನೀಲಿ ಸಾಮ್ರಾಟ ಹಾಗೂ ಸಗ್ಗದ ಹಕ್ಕಿಗೂಡುಗಳ ವಿಶೇಷತೆಗಳೇನು?

20. ಗೋಪಾಲನ ತಾಯಿ ಬಡತನದಿಂದ ಹೇಗೆ ಜೀವನ ನಡೆಸುತ್ತಿದ್ದಳು?

21. ಏಣಿ ತಾನು ಎಂಥವರಿಗೆ ಯಾವ ರೀತಿ ಸ್ಪಂದಿಸುತ್ತೇನೆಂದು ಹೇಳುತ್ತದೆ?

22. ಬಾಳೆಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?

23. ಕಳ್ಳರ ಗುರುವಿನ ಮನಃ ಪರಿವರ್ತನೆ ಹೇಗಾಯಿತು?

24. ಸೇವೆಯ ಪ್ರತಿಫಲದ ಬಗ್ಗೆ ವೈದ್ಯರ ಅಭಿಪ್ರಾಯವನ್ನು ತಿಳಿಸಿ?

**IV. ಕೆಳಗಿನ ಕವಿ / ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 1 x 3 = 3**

25. ರಮೇಶಗೌಡ ಎಂ.ಕೆ.

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ. 1 x 3 = 3**

26. ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ. ಲಕ್ಷಣ ಬರೆದು ಸಮನ್ವಯಗೊಳಿಸಿ. 1 x 3 = 3**

27. ಕೌರವನ ಸೇನೆಯು ಸಾಗರದಂತೆ ವಿಶಾಲವಾಗಿತ್ತು.

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 1 x 3 = 3**

28. "ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು."

ಅಥವಾ

"ಒಗ್ಗಟ್ಟಿನಲ್ಲಿ ಬಲವಿದೆ"

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 5 x 3 = 15**

29. "ಅವರು ಯಾರಿಗೂ ಮೋಸ, ವಂಚನೆ ಮಾಡುವವರಲ್ಲ"

30. "ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತವೆ"

31. ಆ ಮಗುವಿಗೆ ಬಡತನದ ಬವಣೆಯೇಕೆ?

32. "ಗೊತ್ತು ಗುರಿ ಇಲ್ಲದೆ ಕತ್ತಲಲ್ಲಿ ನಡೆದನು"

33. "ದಾಳಿಬಂದೊಡನೆ ಶರಣೆಂಬ ಹೆಣ್ತನವು"

**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 x 4 = 4**

34. ಕಡೆಗೆ ಹಾಯವು ಕಂಗಳೀ ಬಲ

______________________________

______________________________

______________________________

______________________________

ಮೃಡನು ಶಿವಶಿವ ಕಾದಿಗೆಲಿದೆವು ಬಲಕೆ ನಮೊಯೆಂದ

ಅಥವಾ

ಎಂದೊಡರ್ಜುನ ನಗುತ ರಥವನು

______________________________

______________________________

______________________________

______________________________

ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1 x 4 = 4**

35. **“ಸದ್ದುಮಾಡದಿರು”** ಕವಿತೆಯು ನೀಡುವ ಸಂದೇಶವನ್ನು ನೀವು ಮೆಚ್ಚುವ ಅಂಶಗಳೊಡನೆ ವಿವರಿಸಿ?

ಅಥವಾ

**“ಸದ್ದುಮಾಡದಿರು”** ಪದ್ಯದಲ್ಲಿರುವ ಮಾನವೀಯ ಮೌಲ್ಯಗಳನ್ನು ಕವಿಯ ಆಶಯದೊಂದಿಗೆ ವಿವರಿಸಿ?

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1 x 4 = 4 (2 + 2)**

ಆಯಾ ಸಮಾಜದ ರೀತಿ–ನೀತಿಗಳನ್ನು ಆಚಾರ–ವಿಚಾರಗಳನ್ನು ವರ್ತನಾ ಪದ್ಧತಿಗಳನ್ನು, ನಡಾವಳಿಯ ರೂಪರೇಷೆಗಳನ್ನೇ ಸಂಪ್ರದಾಯ ಎನ್ನುತ್ತೇವೆ. ರೂಢಿ, ಪದ್ಧತಿ ಎಂಬ ಪದಗಳನ್ನು ಇದಕ್ಕೆ ಸಂವಾದಿಯಾಗಿ ಬಳಸುತ್ತೇವೆ. ಬಹುಕಾಲದಿಂದ ಬದಲಾಗದೆ ಉಳಿದು ಬಂದ ರೂಢಿಗಳನ್ನೇ ಸಂಪ್ರದಾಯ ಎಂದು ಕರೆಯುತ್ತೇವೆ. ಅತಿಥಿಗಳು ಮನೆಗೆ ಬಂದಾಗ ಕಾಲು ತೊಳೆಯಲು ನೀರುಕೊಡುವುದು, ಬೆಳಿಗ್ಗೆ ಬಾಗಿಲಿಗೆ ನೀರು ಹಾಕುವುದು, ರಂಗೋಲಿ ಬಿಡುವುದು, ಹಬ್ಬ ಹರಿದಿನಗಳಲ್ಲಿ ಮಾವಿನತೋರಣ ಕಟ್ಟುವುದು, ಬಾಳೆಗಿಡಗಳನ್ನು ಕಟ್ಟುವುದು, ಪೂಜಾಕಾರ್ಯಗಳಿಗೆ ಮಡಕೆಗಳಲ್ಲಿ ನೀರು ತರುವುದು, ಗಿಡಮರಗಳನ್ನು, ಪ್ರಾಣಿ ಪಕ್ಷಿಗಳನ್ನು ಪೂಜಿಸುವುದು. ಮಗು ಹೊಸ್ತಿಲು ದಾಟಿದ್ದಕ್ಕೆ ತೆಂಗಿನಕಾಯಿ ಒಡೆಯುವುದು, ಉಪವಾಸ ಮಡುವುದು, ಹಬ್ಬಹರಿದಿನಗಳಲ್ಲಿ ನೆಂಟರಿಷ್ಟರನ್ನು ಆಹ್ವಾನಿಸಿ ಸಂಭ್ರಮಿಸುವುದು, ದಾನ ಧರ್ಮ ಮಾಡುವುದು ಇವೇ ಮೊದಲಾದ ಸಂಪ್ರದಾಯಗಳು ಜನಪದರ ಸಾಮಾಜಿಕ ಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರಿವೆ. ಕೆಲವು ಅವೈಜ್ಞಾನಿಕ ಸಂಪ್ರದಾಯಗಳನ್ನು ಹೊರತುಪಡಿಸಿ ಧಾರ್ಮಿಕ, ಸಾಮಾಜಿಕ ಸಂಪ್ರದಾಯಗಳು ಆತ್ಮಸ್ಥೈರ್ಯ, ಸ್ವಾಭಿಮಾನವನ್ನು ತುಂಬುತ್ತವೆ. ವ್ಯಕ್ತಿ ಹುಟ್ಟಿನಿಂದ ಸಾಯುವವರೆಗೂ ಹತ್ತು ಹಲವು ಸಂಪ್ರದಾಯಗಳ ನಡುವೆ ಬಾಳಿ ಬೆಳಗುತ್ತಾನೆ. ದುಷ್ಟಚಿಂತನೆ, ದುಶ್ಚಟ, ದುರ್ನಡತೆಗಳಿಂದ ಬಹುದೂರ ಇರಲು ಒಳ್ಳೆಯ ಸಂಪ್ರದಾಯಗಳು ನಮಗೆ ನೆರವಾಗುತ್ತವೆ. ಒಳ್ಳೆಯ ಸಂಪ್ರದಾಯಗಳನ್ನು ಪಾಲಿಸುವ ಮೂಲಕವಾಗಿ ಉತ್ತಮ ವ್ಯಕ್ತಿಗಳಾಗಿ ಸಮಾಜದಲ್ಲಿ ಬಾಳಬಹುದಾಗಿದೆ.

36. ಪ್ರಶ್ನೆಗಳು

ಅ) ನಮ್ಮ ಹಿರಿಯರು ಪಾಲಿಸುತ್ತಿದ್ದ ಸಂಪ್ರದಾಯಗಳು ಯಾವುವು?

ಬ) ಸಂಪ್ರದಾಗಳು ನಮ್ಮ ಬದುಕಿಗೆ ಹೇಗೆ ಪೂರಕವಾಗಿವೆ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1 x 4 = 4**

37. 'ರೋಗಗಳ ನಿಯಂತ್ರಣದಲ್ಲಿ ಶುಚಿತ್ವದ ಪಾತ್ರ'

ಅಥವಾ

'ಕ್ರೀಡೆಗಳ ಮಹತ್ವ'

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 x 5 = 5**

38. ನಿಮ್ಮನ್ನು ಚಾಮರಾಜನಗರದ ಸರ್ಕಾರಿ ಪ್ರೌಢಶಾಲೆಯ 'ಪುರಂದರ' ಎಂದು ಭಾವಿಸಿಕೊಂಡು ನಿಮ್ಮ ಬಡಾವಣೆಯಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸುವಂತೆ ಕೋರಿ ಗ್ರಂಥಾಲಯ ಇಲಾಖೆಯ ಜಿಲ್ಲಾ ಉಪನಿರ್ದೇಶಕರಿಗೆ ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಮಡಿಕೇರಿಯ ಸರ್ಕಾರಿ ಪ್ರೌಢಶಾಲೆಯ 'ವಚನಶ್ರೀ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ಆಚರಿಸಿದ 'ವಿಶ್ವಪರಿಸರ ದಿನಾಚರಣೆ'ಯನ್ನು ಕುರಿತು ಸೋಮವಾರಪೇಟೆ ತಾಲೂಕಿನ ಶಿರಂಗಾಲ ಗ್ರಾಮದಲ್ಲಿರುವ 'ವರುದಿನಿ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ.